

# ದೇವಸೇನಾಪತಿ

ಕಥೆ : ರೇವತಿ ಮತ್ತು ಅಕ್ರಿಕಣ್ಣನ್
ಚಿತ್ರ: ಶಂಕರ್




4
ಸ್ವಾಮಿ, ಸ್ವಲ್ಪ ನಿಲ್ಲಿ! ನೀವು ಯಾರು ಹೇಳಿ?
5
ಷಣ್ಮುಖ, ಯುಗ ಯುಗಗಳಿಂದಲೂ ಎಲ್ಲ ಜೀವಿಗಳನ್ನು ಸೃಷ್ಟಿಸುತ್ತಿರುವ ಬ್ರಹ್ಮನೇ ನಾನು. ಈ ವಿಚಾರ ನಿನಗೇಕೆ ತಿಳಿದಿಲ್ಲ?
ಸ್ವಾಮಿ, ನಾನೊಂದು ಪ್ರಶ್ನೆ ಕೇಳುತ್ತೇನೆ. ಎಲ್ಲ ಸೃಷ್ಟಿಗೆ ಆಧಾರ ಯಾವುದು?
6
ಕಾರ್ತಿಕೇಯ, ಓಂಕಾರವೇ ಎಲ್ಲ ಸೃಷ್ಟಿಗೆ ಮೂಲ. ವೇದಗಳೂ ಅದರಿಂದಲೇ ಹುಟ್ಟಿವೆ. ಇವುಗಳು ದೊಡ್ಡವರು ವಿಚಾರ ಮಾಡುವ ತತ್ತ್ವಗಳು. ಇವೆಲ್ಲ ನಿನಗೇಕೆ?
ದಯವಿಟ್ಟು ನನಗೆ ಓಂಕಾರದ ತತ್ತ್ವವನ್ನು ವಿವರಿಸಿ.
7
ಅದನ್ನು ವಿವರಿಸಿ ಹೇಳಲು ಸಾಧ್ಯವಿಲ್ಲ. ಅದನ್ನು ಅನುಭವಿಸಿ ತಿಳಿಯಬೇಕು, ಅಷ್ಟೆ.
ಲಕ್ಷ ಲಕ್ಷ ಯುಗಗಳಿಂದ ನೀನು ಮಾಡುತ್ತಿರುವ ಸೃಷ್ಟಿಕಾರ್ಯದ ಮೂಲ ಓಂಕಾರವನ್ನು ಕುರಿತು ನಿನಗೆ ವಿವರಿಸಲಾಗದೆ? ಆಗದಿದ್ದರೆ ನೀನು ಸೃಷ್ಟಿ ಮಾಡುವುದೆಲ್ಲ ಹೇಗೆ ಸರಿಯಾಗುವುದು? ತಾನೇನು ಮಾಡುತ್ತಿದ್ದೇನೆ ಎಂಬುದನ್ನು ವಿವರಿಸಲಾಗದ ಗುರು ಶಿಕ್ಷೆಗೆ ಅರ್ಹನು.
ಅನಂತರ ಕಾರ್ತಿಕೇಯನು ಬ್ರಹ್ಮನ ನಾಲ್ಕೂ ತಲೆಗಳ ಮೇಲೆ ಹೊಡೆದನು.


8
ವೀರಬಾಹು, ಓಂಕಾರವೆಂದರೆ ಏನೆಂದು ವಿವರಿಸಲಾಗದ ಈ ವ್ಯಕ್ತಿಯನ್ನು ಸೆರೆಮನೆಗೆ ತಳ್ಳಿ !
ಷಣ್ಮುಖನ ಆಜ್ಞೆಯನ್ನು ಅವನ ಸೇನಾಧಿಪತಿಯು ಕೂಡಲೇ ನೆರವೇರಿಸಿದ.
9
ಸೃಷ್ಟಿಕರ್ತ ಬ್ರಹ್ಮನನ್ನು ಸೆರೆಮನೆಯಲ್ಲಿ ಇಟ್ಟಿದ್ದರಿಂದ ಸೃಷ್ಟಿಕಾರ್ಯ ನಿಂತು ಹೋಗಿತ್ತು. ಮಹಾವಿಷ್ಣು ಶಿವನ ಬಳಿಗೆ ಹೋಗಿ ದೂರು ನೀಡಿದ.
ಚಿಂತಿಸಬೇಡ. ನಂದಿ, ಈ ಕೂಡಲೇ ಕಾರ್ತಿಕೇಯನ ಬಳಿಗೆ ಹೋಗು. ಬ್ರಹ್ಮನನ್ನು ಈಗಲೇ ಸೆರೆಮನೆಯಿಂದ ಬಿಡಿಸುವಂತೆ ನಾನು ಹೇಳಿದ್ದಾಗಿ ತಿಳಿಸು.
10
ಪ್ರಭು, ಬ್ರಹ್ಮನನ್ನು ಈಗಲೇ ಬಿಡುಗಡೆ ಮಾಡಬೇಕೆಂದು ನಿಮ್ಮ ತಂದೆ ಆಜ್ಞಾಪಿಸಿದ್ದಾರೆ. ಸೃಷ್ಟಿಕಾರ್ಯ ನಡೆಯದೆ ಇಡೀ ವಿಶ್ವವೇ ಸ್ತಬ್ಧವಾಗಿದೆ.
ದಯವಿಟ್ಟು ನನ್ನ ತಂದೆಗೆ ತಿಳಿಸು– ಸೃಷ್ಟಿಗೆ ಮೂಲವಾದ ಓಂಕಾರ ಎಂದರೆ ಏನೆಂದು ವಿವರಿಸಲು ಸಾಧ್ಯವಾಗದೆ ಹೋದದ್ದಕ್ಕೆ ನಾನು ಅವನಿಗೆ ನೀಡಿದ ಶಿಕ್ಷೆಯಷ್ಟೇ ಇದು– ಎಂದು. ಹಾಗೆ ವಿವರಿಸಲಾಗದೆ ಇದ್ದರೆ ಅವನು ಸೃಷ್ಟಿ ಕಾರ್ಯ ಮಾಡುವುದು ಸರಿಯಾಗದು. ಅವನು ಸೆರೆಮನೆಯಲ್ಲಿ ಇರಲು ಯೋಗ್ಯ ಎಂದು ತಿಳಿಸು.
ಪರಶಿವನ ಆಜ್ಞೆಯನ್ನು ಮೀರುವುದು ಅಪರಾಧವಲ್ಲವೇ, ಪ್ರಭೂ ?
ನಂದಿದೇವ, ದಯವಿಟ್ಟು ಕ್ಷಮಿಸು.
11
ಏನು! ಶಿವನ ಆಜ್ಞೆಯನ್ನು ಧಿಕ್ಕರಿಸುವುದು ಅಪರಾಧವೆಂದು ತಿಳಿಸಿದ ಮೇಲೂ ಅವನು ಒಪ್ಪಲಿಲ್ಲವೆ? ಇರಲಿ, ನಾನೇ ಹೋಗಿ ಅವನನ್ನು ಭೇಟಿಯಾಗುತ್ತೇನೆ.









ದೇವರು ಸರ್ವಶಕ್ತ ಎಂಬುದೇನೋ ನಿಜ. ಆದರೆ ಕೆಲವರಿಗೆ ಮಾತ್ರ ಇದರ ಅರಿವಿದೆ. ಜನರು ಅಹಂಕಾರದಿಂದ ತಾವೇ ಎಲ್ಲವನ್ನೂ ಮಾಡುತ್ತಿರುವುದಾಗಿ ತಿಳಿಯುತ್ತಾರೆ. ಅವರು ದೇವರನ್ನು ನಂಬುವುದಿಲ್ಲ. ಆದರೆ ಯಾರಿಗೆ ದೇವರ ಮೇಲೆ ನಿಜವಾದ ನಂಬಿಕೆ ಇರುವುದೋ ಅವರನ್ನು ಆ ಭಗವಂತನು ಎಲ್ಲ ತೊಂದರೆಗಳಿಂದಲೂ ಪಾರು ಮಾಡುತ್ತಾನೆ. – ಶ್ರೀಮಾತೆ ಶಾರದಾದೇವಿ